Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 29] ಶುಕ್ರವಾರ 31—10—47 [ಬಿಡಿ ಪ್ರತಿ 3½ ಪೈ

ಮುಸ್ಲಿಂ ಸಂಸ್ಥೆ ನೇರ ಕಾರ್ಯಾಚರಣೆ ಹೂಡುವುದೇ ?

ಹೈದರಾಬಾದು ಆ 28.... ಪ್ರ ರಂ ಗಾಬಾದಿನಲ್ಲಿ 15 ಪಾಪರ ಮುಸ್ಲಿಮರು ಮೆರವಣಿಗೆ ಮಾಡಿ ಹೈದರಾಬಾದು ಸ್ವತಂತ್ರವಾಗಿಂಬೇಕೆಂದರು. ಡೊಮಿನಿಯನ್ನಿಗೆ ಸೇರಿದರೆ ವೀರ ಕಾರ್ಯಾಚರಣೆಯನ್ನು ಕೈಗೊಳ್ಳುವುದಾಗಿ ತಿಳಿಸಿದರು.

ರಷಿಯನ್ನರು ೧೫ ದಿವಸಗಳಲ್ಲಿ ದೆಹಲಿ ತಲಪುವರು

ಲಂಡನ್ ಆ 28.... ಏವಾನ್ಸ ನಾಯಕ ಹಾರ್ವೆ ಈ ದಿವಸ ಕಾವನ್ಸು ಸಭೆಯಲ್ಲಿ ಭಾಷಣ ಮಾಡುತ್ತಾ, ಪಾಕಿಸ್ತಾನದಲ್ಲಿ ಗೂಂಡಾರಾಜ್ಯವೇ ಇಷ್ಟೂ ನಡೆದರೆ, ರಷ್ಯಾ ಇನ್ನು 15 ದಿನಗಳಲ್ಲಿ ದೆಹಲಿ ತಲಪುವದ ಎಂದು ಜೆಷ್ಟರು ಹೇಳಿದರೆಂದು ತಿಳಿಸಿದರು.

ವಜ್ರ ವಾಪಸು ಮಾಡಿ

ಲಂಡನ್ ಆ 28— ನಾಜಿಗಳು ಲೂಟಿ ಮಾಡಿದ್ದ ವಜ್ರಗಳನ್ನು ವಾಪಸ್ಸು ಮಾಡಬೇಕೆಂದು ಪೋಲೆಂಡು ಕೇಳಿದೆ.

ಹೋಟೆಲು ಮಾಲೀಕರಿಗೆ ಎಚ್ಚರಿಕೆ

ಮದರಾ— ಅಸಹಕಾರ ಗೃಹಗಳ ತಲೆಸಿಗಾರರು ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ಮಾಲೀಕರ ಸಂಘಕ್ಕೆ ಪ್ರಕಟಣೆ ಇತ್ತಿದಾರೆ

ಭಾರತದ ದೊಂಬಿಗಳಿಗೆ ಜವಾಬ್ದಾರ ನಾನಲ್ಲ —

ಹೀಗೆಂದು ಅಲ್ಲಿ ಪ್ರಧಾಫರು ಕಾಸುನ್ಸು ಸಭೆಯಲ್ಲಿ ತಿಳಿಸಿದರ..

ಕಾಲೇಜು ವಾರ್ಷಿಕೋತ್ಸವ

ಮದಕ್ತಾಲಯ ಆ 29

ಜಗದ್ಗುರು ಶ್ರೀ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ಶ್ರೀ ಮುಕ್ಸಯವಿಾಂದ್ರ ತೀರ್ಥಶ್ರೀಗಳವರ ಮಾನ್ಯ ನೇತೃತ್ವದಲ್ಲಿ ಶ್ರೀ ಗುರು ಸಾರ್ವಭೌಮ ಸಂಸ್ಕೃತ ಕಾಲೇಜಿನ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡೆಯಿತು. ತಾ || 24 ರಲ್ಲಿ ವಾರ್ಷಿಕ ವರದಿಯನ್ನು ಕಾಲೇಜಿನ ಪ್ರಿನ್ಸಿಪಾಲರು ಶ್ರೀಗಳವರಲ್ಲಿ ಓದಿ ಅರ್ಪಿಸಿದರು. ತಾ || 26 ರಲ್ಲಿ ಹರಿಕಥೆ ಮತ್ತು ಸಂಸ್ಕೃತ ಭಾಷಣಗಳಾದವು. ತಾ || 27 ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಡೈರೆಕ್ಟರು ಶ್ರೀ ಪಂಚಮುಖಿ ಯವರು ಉಪನ್ಯಾಸವನ್ನಿತ್ತರು. ರಾತ್ರೆ ಕವಿಸಾರ್ವಭೌಮ ಶಿಖಾಮಣಿ ಶ್ರೀಮತ್ಸುಧೀಂದ್ರತೀರ್ಥ ಶ್ರೀಪಾದಂಗಳವರಿಂದ (ಶ್ರೀ ರಾಯರ್ಥ ಗುರುಗಳು) ರಚಿತವಾದ ಸುಭದ್ರಾ ಪರಿಣಯ (ಸಂಸ್ಕೃತ) ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿದರು. ಶ್ರೀ ರಾಜಾ ಎಸ್ ಗುರುರಾಜಾಚಾರ್ಯ (ಅರ್ಜುನ) ಕುರುಡಿ ಸುಶೀಲೇಂದ್ರಾಚಾರ್ಯ (ಸುಭದ್ರ) ರಿಕ್ಕಿ ವೆಂಕಣ್ಣಾಚಾರ್ಯ (ಎದೂಷಕ) ಗುಂಜಳ್ಳಿ ವಾದೀಂದ್ರಾಚಾರ್ಯ (ಬಲರಾಮ) ಇವರುಗಳ ಅಭಿನಯವು ಅತ್ಯುತ್ತಮವಾಗಿತ್ತು. ನಾಟಕಾನಂತರ ಕಾಲೇಜು ಪ್ರಿನ್ಸಿಪಾಲರು ಉಪಸಂಹಾರ ಭಾಷಣ ಮಾಡಿದಮೇಲೆ ಕಾರ್ಯಕ್ರಮ ಮುಕ್ತಾಯವಾಯ್ತು.

ವಿಜಯೋತ್ಸವದ ಸಂತೋಷಾರ್ಥವಾಗಿ ನಾಳೆ ನಮ್ಮ ಅಫೀಸಿಗೆ ರಜಾ. ವ್ಯಾ.

ಸುದ್ದಿಗಳು

ಇಸ್ತಂಬಾಲ್ ಆ 28— ಪಾಕೀ ಸ್ಥಾನದಲ್ಲಿ ಕಮ್ಯುನಿಜಂ ಬುಡವೂರಲಾರದೆಂದು ಫಿರೋಜಖಾನ್ ನೂನರು ಹೇಳಿದ್ದಾರೆ.

ಲಂಡನ್ ಆ 68— ಸಾರ್ವಜನಿಕ ನಿಧಿಯಿಂದ ರಾಜಕುಮಾರಿ ವಿವಾಹದಲ್ಲಿ 60 ಸಾವಿರ ರೂ. ವೆಚ್ಚಮಾಡಲಾಗುವುದು.

ಮಧುರಾ— ಕಾಲರಾ ಪ್ರಯುಕ್ತ ವೈಗಾಲ್ ನದಿಯಲ್ಲಿ ಒಟ್ಟೆ ಒಗೆಯು ಕೂಡದೆಂದು ಸರ್ಕಾರಿ ಆಜ್ಞೆ ಆದಕ್ಕಾಗಿ ಅಗಸರ ಮುಷ್ಕರ.

ಮೈಸೂರು ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷ ಸ್ಥಾನವು ಪ್ರಜಾಪಕ್ಷದ ನಾಯಕರಾದ ಶ್ರೀ ಗುಮ್ಮಟಾ ರೆಡ್ಡಿಯವರಿಗೆ ದೊರೆಯಬಹುದೆಂದು ಹೇಳಲಾಗಿದೆ.

ರಾಜಕೋಟೆ ಆ 28 — ಭಾರತ ಸ್ವಾತಂತ್ರ್ಯ ಕಾನೂನಿನ ಮೇರೆ, ಡೊಮಿನಿಯನ್ನಿಗೆ ಸೇರಬಯಸುವ ರಾಜರು ಪ್ರಜೆಗಳೊಡನೆ ಪರಿಶೀಲನೆ ಮಾಡುವುದು ಅನಗತ್ಯವೆಂದು ಕಠಾಚಿಯಲ್ಲಿರುವ ಜುನಘಢ ರಾಜರು ಧಾರಂಗಧರಾಜರಿಗೆ ಬರೆದಿದ್ದಾರೆ

ಪುದುಕೋಟ್ಟಾ ಆ 23— ಮಹಾರಾಜರು ವಿಜಯದಶಮಿ ದಿವಸ ಬಾಣ ಬಿಡುವ ಮಹೋತ್ಸವದಲ್ಲಿ ಆ ಬಾಣ 7 ವರ್ಷದ ಬಾಲಕನಿಗೆ ತಗುಲಿ ತೀವ್ರ ಗಾಯವಾಗಿದೆ.

ಬೆರೆಗಳೂರು ಆ 27— ನವೆಂಬರ್ ತಾ || 15 ರಲ್ಲಿ ಪಂ || ನೆಹರೂ ವರ್ಧಂತಿ ಆ ಸುದಿನದಲ್ಲಿ ಪ್ರಭುಗಳು ಹರಿಜನ ದೇವಾಲಯ ಪ್ರವೇಶವನ್ನು ಘೋಷಿಸಬೇಕು ಎಂದು ಕೊಗೇಹಳ್ಳಿಂದ ಮಲೆ ಹೊಂಟಿದೆ

ಸ್ಟೇಟು ಕಾಂಗ್ರೆಸ್ಸು ಆದೇಶಾನುಸಾರ ಸದ್ಭಾವಲು ಸಂಸ್ಥಾನದ ಪೊಲೀಸ್ ಪಟೇಲ್ ಪೋಲೀಸುಪಟೇಲ್ ಪಟ್ವಾರಿ ಮೊದಲಾದವರು ತಮ್ಮ ಪದವಿಗಳಿಗೆ ರಾಜೀನಾಮೆ ಕಳುಹಿಸಿರುವರೆ.

ಮಾದರಿಯ ಮೈಸೂರು

ಮಾದರಿಯ ಮೈಸೂರಿನಲ್ಲಿ ಇದೀಗ ಮಾರಣ ಯಜ್ಞ ಕೊನೆಗೊಂಡು ಶಾಂತಿಯ ಕಿರಣಗಳು ಕಾಣಿಸಿವೆ. ಮೈಸೂರಿನ ಪ್ರಜಾ ಜಳವಳಕ್ಕೆ ಜಯ ದೊರಕಿತು. ಆ ಜಯಕ್ಕೆ ಅವರು ಅರ್ಹರು. ಅವರು ಅನುಭವಿಸಿದ ಬಣ್ಣಬವಣೆಗಳು ವ್ಯರ್ಥವಾಗಲಿಲ್ಲ. ಅವರ ಸತ್ಯಾಗ್ರಹ ಬಿಸಲ್ಗುದುರೆಯಾಗಲಿಲ್ಲ. ಅವರು ಹೂಡಿದ ನ್ಯಾಯವಾದ ಜಳವಳಕ್ಕೆ ಜಯವು ದೊರಕಿತು. ಮೈಸೂರಿನ ಹೆಮ್ಮೆಯ ನಾಡು ಹಬ್ಬ ದಸರಾ ಪ್ರಾರಂಭವಾಗುವುದಕ್ಕೆ ಮೊದಲೇ ಶಾಂತಿಯ ಚಿಹ್ನೆಗಳು ಮೂಡಿದುದು ಒಳಿತಾಯಿತು. ಮೈಸೂರು ಮಹಾರಾಜರು ಸಂಸ್ಥಾನಿಕ ಕಾಂಗ್ರೆಸ್ಸಿನ ಕೇಳಿಕೆಗೆ ಪೂರ್ಣ ಬಗ್ಗಿದ್ದಾರೆ. ಮೊದಲು ತಮ್ಮ ಮಂತ್ರಿ ಲೋಚಕರ ಸಲಹೆಗಳಿಗೆ ಸೊಪ್ಪು ಹಾಕಿ ಅದುಂತೆ ಪ್ರದರ್ಶಿಸಿದರೂ ಕೊನೆಗೆ ಜನತೆಯ ಮನಸ್ಸಿಗೆ ಸಂಪೂರ್ಣ ತಬಿಬಾಗಿದ್ದಾರೆ. ಜನರ ಜವಾಬ್ದಾರಿ ಸರಕಾರದಿಂದಾಗಿ ಆದರ, ಗೌರವ, ವಿಧೇಯತೆಗಳು ದ್ವಿಗುಣಿತವಾಗದಿರಲಾರವು. ಆದುದ್ದೆ 'ಮಾದರಿಯ ಮೈಸೂರು' ಎಂದು ಸರ್ವತ್ರ ಸಾರಲ್ಪಟ್ಟಿರುವ ಮೈಸೂರು ಮತ್ತೊಮ್ಮೆ ಆ ಅನ್ವರ್ಥ ನಾಮಕ್ಕೆ ಅರ್ಹವೆನಿಸುವ ವಿಶೇಷದೂರದಿರಲಾರದು ಈದೇ ರೀತಿಯ ವಿವೇಕ ಹೈದರಾಬಾದು ಕಾಶ್ಮೀರಗಳಿಗೆ ಬೊಧಿಸಿದಾದರೆ ಅವುಗಳಿಗೂ ಮೋಕ್ಷ ಕಟ್ಟಿಟ್ಟದ್ದು. ಆಂತಾಗಲಿ. (ಪ್ರ)

ಪಾಕ್ ಮಾರ್ಕ್

ಪಾಕಿಸ್ತಾನ ಸರಕಾರವು ಡೊಮಿನಿಯನ್ನಿನಲ್ಲಿ ಮಾರಾಟ ಮಾಡಲು ರಫ್ತಾದಾರಿ ಕೊಡುವ ವಸ್ತುಗಳ ಮೇಲೆ 'ಪಾಕ್‌ಮಾರ್ಕ್' ಎಂಬ ಗುರುತನ್ನು ಇನ್ನು ಮೇಲೆ ಉಪಯೋಗಿಸುವುದು.

ಇದು ಕೊಡದು

ನವದೆಹಲಿ ಆ 28— ಟಿಕೆಟ್ ಇಲ್ಲದೆ ರೈಲ್ವೆ ಪ್ರಯಾಣ ಮಾಡುವುದು ಭತ್ತಿಕವನ್ನು ನಾಶ ಮಾಡುವುದೆಂದು ಪಾತ್ರಿಧರ್ಮಾ ಸಭೆಯಲ್ಲಿ ಗಾಂಧೀಜಿ ಹೇಳಿದ್ದು.

At Opera
2nd Glorious Week
MAD-MAN
.... with —
N.S.Krishnan, T A Madurau

Edited, Printed and Published by M. S Krishna Rao at the Satyavadi Press Chamaarja Agrahar Mysore.

Woodlands
From 31–10–47
ಅಶೋಕಕುಮಾರ್
ವೀರಾ, ಹ್ಯಾರೊ, ಪಾತ್ರವಹಿಸಿರುವ
ಶಿಕಾರಿ
(ಅವೋಧ ಹಿಂದಿ ಚಿತ್ರ)
ಪ್ರತಿ ದಿನ 3 ಆಟಗಳು

Office of theMunicipal Engineer
City Municipal Council
Mysore, dated 11–10–47

NOTIFICATION

Sealed tenders will be received up to 4 p.m. on 3 rd November 1947 by the Municipal Engineer for Flooring inside the Dry Cattle Shed of Municipal Farm.

Each tender must be accompanied with a challan for having remitted Rs. 165 in the Municipal Treasury as earnest money.

For full particulars please see the detailed notification on the notice Board.

S, NARAYANASWAMY
Municipal Engineer

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿ ಇದು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಅಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮಂತ್ರಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಪಾಂಥಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡಶಕ್ತವಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ವಿಜಯೋತ್ಸವವನ್ನು
ಎಲ್ಲರೂ ವೈಭವದಿಂದ
ಆಚರಿಸಿ

Woodlands
Morning Shows at 10-30
From 31—10—47 For 7 days
The Black Panther
— starring —
Frankies Thomas
Frances Robinson
Jack Mulhall
Alseean

Save the Cow
ಗೋ ವಧೆ ನಿಲ್ಲಲಿ

ಪ್ರಜೆಗಳು ಹೀಗಿರಬೇಕಲ್ಲವೇ ?

ಕಾರ್ಯಕರ್ತರ ವಿಶೇಷ ಪ್ರಭಾವದ ಫಲಿತವಾಗಿ ಗದ್ವಾಲು ಸಂಸ್ಥಾನದಲ್ಲಿನ ಹನೆಜ್ಞಂದು ಗ್ರಾಮಗಳಲ್ಲಿ ಸೇಂದಿ ಕುಡಿಯುವದನ್ನೇ ನಿಲ್ಲಿಸಿರುವರು. ಯಾರೂ ಕುಡಿಯುತ್ತಿಲ್ಲ. ದಿನಂಪ್ರತಿ ಗಾಡಿಗಳ ಮೇಲೆ ಬರುತ್ತಿರುವ ಸೇಂದಿಯೆಲ್ಲವೂ ವ್ಯರ್ಥವಾಗುತ್ತಿದೆ. ಮದ್ಯಪಾನದ ಎಪಯಿದಲ್ಲಿ ಜನಂ ದೃಕ್‌ಪಥವು ಬದಲಾವಣೆಯಾದಲ್ಲಿ ದೇಶಕ್ಕೆ ಎಷ್ಟೋ ಲಾಭವಾಗುವದರಲ್ಲಿ ಸಂದೇಹವಿಲ್ಲ.

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೆರಣಿಗಳನ್ನು ತಟ್ಟುತಿರುವುದು ಕಂಡುಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಕೋರಿಧೆ ಹಾಗೆ ನಿಲ್ಲಿಸದಿದ್ದಲ್ಲಿ ಮುನಿಸಿಪಲ್ ಬೈಲಾ ರೀತ್ಯಾ ಕಾರ್ಯಕ್ರಮಗಳು ತೆಗೆದುಕೊಳ್ಳಲಾಗುತ್ತೆ.

ಎಸ್. ಎಸ್. ಒರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯವಿಲ್ಲದ್ದಾಗ್ಯೂ ಸಹಾ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಔಟ್ಲೆಟ್ ಕಕ್ಕಸ್ಸುಗಳು ಕಟ್ಟಿಸಿರುವುದಿಲ್ಲ ಮನೆ ಮಾಲೀಕರುಗಳು ಕೂಡ್ಲೆ ಡ್ರೈನೇಜು ಸೌಲಭ್ಯವಿರುವ ಜರಂಡಿಗಳಲ್ಲಿ ಫ್ಲಷಿಂಗ್ ಕಕ್ಕಸ್ಸುಗಳನ್ನು ಮಗೈರೆ ಕಟ್ಟಿಸಬೇಕಾಗಿ ಕೋರಿಧೆ. ತಪ್ಪಿದರೆ ಕಾನೂನು ರೀತ್ಯಾ ಸೂಕ್ತವಾದ ಕಾರ್ಯಕ್ರಮ ನಡೆಸಲಾಗುತ್ತೆ.

ಎಸ್. ಎಸ್. ಒರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು